

ಮೊದಲು ತಾಯ ಹಾಲ ಕುಡಿದು
ನಲ್ಮೆಯಿಂದ ತೊದಲಿ ನುಡಿದು
ಗೆಳೆಯರೊಡನೆ ಬೆಳೆದು ಬಂದ ಮಾತದಾವುದು

ಸವಿಯ ಹಾಡ ಕತೆಯ ಕಟ್ಟಿ
ಕಿವಿಯಲೆರದು ಕರುಳ ತಟ್ಟಿ
ನಮ್ಮ ಜನರು ನಮ್ಮ ನಾಡು ಎನಿಸಿತಾವುದು
ನಮ್ಮ ಕವಿಗಳೆಂಬ ಕೋಡು ತಲೆಗದಾವುದು

–ಬಿಎಂಶ್ರೀ

# ಶರಣೆನ್ನುವೆ ಕಂದನಿಗೆ

–ದೀಕ್ಷಿತಾ ವರ್ಕಾಡಿ
ಸಹಾಯಕ ಪ್ರಾಧ್ಯಾಪಕಿ, ಲೇಖಕಿ, ಕುಶಾಲನಗರ

‘ಇಟ್ಟಿ...’ ಅಂದರೆ ‘ಇಗೋ ಅಮ್ಮ...’ ಎಂದರ್ಥ. ನನ್ನ ಮಗಳು ಸಾರ್ಯ ಆಮ್ರಪಾಲಿ ಹಾಗೆ ಹೇಳುವುದನ್ನು ಅರ್ಥಮಾಡಿಕೊಳ್ಳಲು ನನಗೂ ಚೂರು ಸಮಯ ಬೇಕಾಯಿತು. ‘ಈಯಾ... ಕಾಕೂ...’ ಎಂದರೆ, ನಾನು ಕೆಲಸದಿಂದ ಸಂಜೆ ವಾಪಸ್ ಬರುವಾಗ ಜೋರಾಗಿ ಖುಷಿಯಿಂದ ಉದ್ಗರಿಸುವ ರೀತಿ. ‘ತ್ತೆತ್ತೆ ತ್ತೆ...’, ಆರಾಮದಾಯಕ ಆಟದ ಜೋಶ್‌ನಲ್ಲಿ ಇದ್ದಾಗಿನ ಅವಳ ಲಹರಿ.

‘ಟಿಂಕು ನಾಯಿ ಆಮ್... ಸಾರ್ಯ ಆಂ...’ ಎಂದಾಗ ದೊಡ್ಡದಾಗಿ ಬಾಯಿಬಿಟ್ಟು ‘ಆಂ...’ ಎಂದು ಟಿಂಕು ಜೊತೆ ಸ್ಪರ್ಧಿಸುತ್ತಾ ಊಟ ಮಾಡುತ್ತಾಳೆ. ಅವಳ ಊಟದ ಜೊತೆಗಾರ ಟಿಂಕುವಿಗೂ ಅವಳ ಭಾಷೆ ಅರ್ಥವಾದೀತೇನೋ? ನಾನಂತೂ ನಮ್ಮಿಬ್ಬರ ನಡುವಿನ ಈ ಪದಲಾಲಿತ್ಯವನ್ನು ಆಸ್ವಾದಿಸುತ್ತಲೇ ಅವಳ ಪಾಲನೆಯಲ್ಲಿ ಮುಳುಗಿಬಿಡುತ್ತೇನೆ.

ಮನೆ ನಿಶ್ಶಬ್ದವಾಗಿದ್ದರೆ ನನ್ನ ಮಗಳು ಏನಾದರೂ ಕಿತಾಪತಿ ಮಾಡುತ್ತಿದ್ದಾಳೆ ಎಂದೇ ಅರ್ಥ. ನಾನು ಈ ನಿಶ್ಶಬ್ದವನ್ನು ಅರ್ಥಮಾಡಿಕೊಳ್ಳಬಲ್ಲೆ. ಬಹುಶಃ ಹೆಚ್ಚಿನ ಅಮ್ಮಂದಿರಿಗೆ ಈ ಒಂದು ನಿಶ್ಶಬ್ದದ ಗ್ರಹಿಕೆ ಇದ್ದೇ ಇರುತ್ತದೆ.

ದೇವರ ಮನೆಗೆ ಹೋಗಿ ಅವಾಂತರ ಮಾಡುತ್ತಾಳೆಂದು, ಲಾಕ್ ಮಾಡಲಾಗಿತ್ತು. ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನಾನು ಬೀಗ ತೆಗೆದು ಅವಳನ್ನು ಒಳಬಿಟ್ಟಿದ್ದೆ. ‘ನಿನಗೆ ಇಷ್ಟ ಬಂದ ಹಾಗೆ ಆಟವಾಡು ಮಗಳೇ...’ ಎಂದಿದ್ದೆ ಬಹಳ ಉದಾರವಾಗಿ. ನನ್ನ ಆ ಪುಟ್ಟ ದೇವತೆ ಮೈಯೆಲ್ಲಾ ಅರಿಶಿನ, ಕುಂಕುಮ ಮಾಡಿಕೊಂಡು ಅದೆಷ್ಟು ಸಂಭ್ರಮಿಸಿದ್ದಳು! ಮುಖದಲ್ಲಿ ಎಂಥಾ ತುಂಟ ನಗೆ! ಆ ಸಂಭ್ರಮವನ್ನು ನಾನು ಓದಬಲ್ಲೆ ಎಂದು ನನಗೇ ಹರ್ಷವಾಗುತ್ತದೆ. ತನ್ನ ಸಂಭ್ರಮವನ್ನು ಅಮ್ಮ ಓದುತ್ತಿದ್ದಾಳೆ ಎಂಬ ಅರಿವೂ ಅವಳ ಮುಖದಲ್ಲಿದೆ. ಅವಳೂ, ‘ಅಮ್ಮನಿಗೆ ಸಿಟ್ಟೇನಾದರೂ ಬಂದಿದೆಯೋ ಹೇಗೆ’ ಎಂದು ಪರೀಕ್ಷಿಸುತ್ತಾಳೆ. ನನ್ನಮುಖದ ಮೇಲಿರುವ ನಗೆಯನ್ನು ಓದಿಕೊಂಡು ಮತ್ತಷ್ಟು ಖುಷಿಪಡುತ್ತಾಳೆ. ಹೀಗೆಲ್ಲ ನಡೆಯುತ್ತಿರುವಾಗ ಪದಗಳಿಗೆಲ್ಲ ಜಾಗವೆಲ್ಲಿದೆ! ಖುಷಿಯ ಬೆಳಕೊಂದು ನಮ್ಮ ಸುತ್ತಲೂ ಚೆಲ್ಲಿ, ಪದಗಳೆಲ್ಲ ಅಲ್ಲಿಂದ ಪರಾರಿಯಾಗಿರುತ್ತವೆ ಎನಿಸುತ್ತದೆ.

ನಾನು ಚಪಾತಿ ಲಟ್ಟಿಸುತ್ತಿದ್ದರೆ, ಬಟ್ಟೆ ಮಡಚುತ್ತಿದ್ದರೆ, ಬರೆಯುತ್ತಿದ್ದರೆ ಎಲ್ಲದಕ್ಕೂ ಬಂದು ಅಮ್ಮನಿಗೆ ಸಹಾಯ ಮಾಡುತ್ತಾಳೆ ನನ್ನ ಪೊರೆಯುವ ಅಮ್ಮನಂತೆ. ಅವಳ ಈ ‘ಸಹಾಯ’ದಿಂದ ನನ್ನ ಕೆಲಸ ಡಬಲ್ ಆದರೂ ಅವಳ ಜೊತೆಗೆ ಕಳೆಯುವ ಸಮಯ ಮಾತ್ರ ನಿಜಕ್ಕೂ ಆನಂದಮಯ. ಅದು ಮತ್ತೆಂದೂ ಸಿಗದೇನೋ ಎಂದು ಎಲ್ಲ ಕ್ಷಣಗಳನ್ನು ಬಾಚಿಕೊಳ್ಳುತ್ತೇನೆ. ಅಂಬಾ, ಚಿಟ್ಟೆ, ಪಕ್ಕಿ, ಕೊಕ್ಕ... ಎಂದು ಪುಟ್ಟ ಬೆರಳು ತೋರಿಸುತ್ತ ನೂರಾರು ವಿಷಯಗಳನ್ನು ನಗುತ್ತಲೇ ಗುರುತಿಸುತ್ತಾಳೆ.

ಅವಳು ಮೊದಲ ಬಾರಿಗೆ ಕಪ್ಪೆ ಮುಟ್ಟಿದಾಗ ಮುಖದಲ್ಲಿ ಮೂಡಿದ ಅಚ್ಚರಿ ವರ್ಣಿಸಲಸಾಧ್ಯ. ಇರುವೆಯ ಜೊತೆ ಫ್ರೆಂಡ್‌ಶಿಪ್ ಬೆಳೆಸಿಕೊಳ್ಳಲು ಹೋಗಿ ಕಚ್ಚಿಸಿಕೊಂಡು ಕಣ್ಣೀರು ಹಾಕುತ್ತಿದ್ದರೆ, ನಾನು ಅವಳ ಅರಿವಿನ ದಾರಿಯನ್ನು ನೋಡುತ್ತ ವಿಸ್ಮಯಗೊಳ್ಳುವೆ. ಸಮಾಧಾನ ಮಾಡುವೆ. ವಿದ್ಯುತ್ ಬೆಳಕು ಆರಿಸಿ ಟಾರ್ಚ್ ಹಾಕಿದಾಗ ಹೊರಹೊಮ್ಮುವ ಬೆಳಕಿನ ಕೋಲನ್ನು ಹಿಡಿಯಲು ಓಡಿ ಹೋಗಿ ಅದು ಸಿಗದೇ ಗಲಿಬಿಲಿಯಾಗಿದ್ದಾಳೆ. ‘ಬುಶ್ಯಾ...’ ಎಂದ ಕೂಡಲೇ ಪುಟ್ಟ ಪುಟ್ಟ ಹೆಜ್ಜೆ ಇಟ್ಟುಕೊಂಡು ಸ್ನಾನದ ಕೋಣೆಗೆ ಓಡುತ್ತಾಳೆ. ನೀರಿನಲ್ಲಿ ಆಟವಾಡುವುದು ಬಹಳ ಮಜಾ ಅವಳಿಗೆ. ಹೀಗೆ ಪ್ರತಿಕ್ಷಣವೂ ನನಗೆ ಪಾಠಮಾಡುವ ಅವಳಿಗೆ ನಾನು ಮನದಲ್ಲಿಯೇ ಒಂದು ಮಾತು ಹೇಳುತ್ತಾ ಇರುತ್ತೇನೆ. ಅದೆಂದರೆ ‘ನಿನ್ನೊಳಗಿನ ಅದ್ಭುತ ಸೃಜನಶೀಲತೆಗೆ, ಜೀವನ ಉತ್ಸಾಹಕ್ಕೆ, ಸಂಶೋಧನಾ ಮನೋಭಾವಕ್ಕೆ ಶರಣು ಕಂದಾ...’ ■



ಮಗಳು ಸಾರ್ಯಾ ಆಮ್ರಪಾಲಿ ಜೊತೆಗೆ ದೀಕ್ಷಿತಾ ವರ್ಕಾಡಿ

ಸುವರ್ಣ ಸಂಭ್ರಮ